"ನಾನು ಬೆಳೆದಿದ್ದೆಲ್ಲಾ ನಮ್ಮ ಸೋದರಮಾವನ ಮನೇಲಿ ಅಂತ ಗೊತ್ತುಂಟಲ್ವಾ ನಿಮಗೆ?"

"ನೀನೇ ಒಂದ್ಸಲ ಹೇಳಿದ್ದಿ. ನಿನ್ನ ಸಾಕಿ ದೊಡ್ಡ ಮಾಡಿದ್ದು ಅಜ್ಜಿ ಅಂದಿದ್ದಿ..."

ನಳಿನಿ ಮೌನದ ಮುಸುಕು ಹೊದ್ದಂತೆ ಸ್ವಲ್ಪ ಹೊತ್ತು ಬಾಯ್ಬಿಡದೆ ಕೂತಿದ್ದಳು. ಅನಂತ ಅವಳ ಭುಜ ತಬ್ಬಿದ್ದ.

"ಯಾಕೇ? ತೌರಿಗೆ ಹೋಗೋಕೆ ಇಷ್ಟ ಇಲ್ದಿದ್ರೆ ಸೋದರಮಾವನ ಮನೆಗೇ ಹೋಗು. ಅದಕ್ಕೇನೀಗ..."

"ಅವರು ಕರ್ಕೊಂಡ್ಹೋಗ್ತಾರೆ ಅಂತ ನಿಮಗೆ ಗ್ಯಾರಂಟಿ ಇದೆಯಾ?"

"ಒಗಟೊಗಟಾಗಿ ಮಾತಾಡ್ಬೇಡ. ನಿನ್ನ ಮನಸ್ಸಲ್ಲಿ ಏನುಂಟು ಅನ್ನೋದನ್ನ ಬಾಯ್ಬಿಟ್ಟು ಹೇಳು..."

ಕೂತಲ್ಲೇ ಬಾಗಿ ಅನಂತನ ತೊಡೆಯ ಮೇಲೆ ತಲೆ ಇಟ್ಟಿದ್ದಳು ನಳಿನಿ. ಅವಳ ಬಿಸಿಯುಸಿರು ಅನಂತನ ತೊಡೆಯನ್ನು ಬೆಚ್ಚಗಾಗಿಸುತ್ತಾ, ಬೆರಳುಗಳು ಅವಳ ಹಿಂದಲೆ ನೇವರಿಸುತ್ತಾ, ಬಿಗಿದ ಕಂಠದಿಂದ ಕೇಳಿದ್ದಳು ನಳಿನಿ,

"ಈ ಲೋಕದಲ್ಲಿ ವಿನಾಕಾರಣ ಒಬ್ರನ್ನೊಬ್ರು ಯಾಕೆ ದ್ವೇಷಿಸ್ತಾರೆ ಅಂತ ನಿಮಗೇನಾದ್ರೂ ಗೊತ್ತಿದೆಯಾ, ಅದೂ ರಕ್ತಸಂಬಂಧದಂತಾ ಸಮೀಪದ ಸಂಬಂಧದಲ್ಲಿ..." ಮಡದಿ ಏನನ್ನೋ ಮನಸ್ಸಲ್ಲಿಟ್ಟುಕೊಂಡು ಇಂತಾ ಮಾತಾಡುತ್ತಿದ್ದಾಳೆ ಎಂದು ಅರಿವಾಗದಷ್ಟು ಅನಂತ ದಡ್ಡನಲ್ಲ.

"ವಿನಾಕಾರಣ ಅಂತ ನಿನಗೆ ಅನ್ನಿಸ್ಬಹುದು. ದ್ವೇಷಕ್ಕೆ ಏನೋ ಕಾರಣ ಇರಬಹ್ದು. ಅದು ದ್ವೇಷ ಅಂತ ನೀನು ತಪ್ಪು ತಿಳ್ಕೊಂಡಿರಲೂಬಹುದು. ಯಾವ ವಿಷಯದಲ್ಲೂ ಅವಸರದಿಂದ ತೀರ್ಮಾನ ಮಾಡಿಬಿಡ್ಬಾರ್ದು ಕಣೇ ತಣ್ಣೀರನ್ನೂ ತಣಿಸಿ ಕುಡೀಬೇಕು ಅನ್ನೋ ಮಾತಿದೆಯಲ್ವಾ?"

"ಹೇಳೋಕೇನಂತೆ, ಸಲೀಸು..." ಅಂದಳು ನಳಿನಿ.

"ಅದೇನು ನಿನ್ನ ಮನಸ್ಸಲ್ಲಿ ಕೊರೀತಿದೆಯೋ ಹೇಳಾದ್ರೂ ಹೇಳು. ನೀನು ಅಂದ್ಕೊಂಡಿರೋದು ಸರಿಯೋ, ತಪ್ಪೋ ಅಂತ ಯೋಚ್ನೆ ಮಾಡೋಣ..."

"ಅದೇನು ನಿನ್ನ ಮನಸ್ಸಲ್ಲಿ ಕೊರೀತಿದೆಯೋ ಹೇಳಾದ್ರೂ ಹೇಳು. ನೀನು ಅಂದ್ಕೊಂಡಿರೋದು ಸರಿಯೋ, ತಪ್ಪೋ ಅಂತ ಯೋಚ್ನೆ ಮಾಡೋಣ..."

"ಹೇಳ್ತೀನಿ ಕಣ್ರೀ. ನನ್ನ ತೌರುಮನೆಯೋರು ನನ್ನ ಬಾಣಂತನಕ್ಕೆ ಕರ್ಕೊಂಡ್ಹೋಗ್ತಾರೆ ಅಂತ ನಂಬ್ಕೊಂಬಿಟ್ಟಿದೀರಿ ನೀವು. ನಂಗೆ ಮಾತ್ರಾ ಆ ನಂಬಿಕೆ ಇಲ್ಲ..."

"....."

"ನನ್ನ ಮನಸ್ಸಲ್ಲಿರೋದನ್ನ ಅದೇನೋ ಸ್ವಾಭಿಮಾನ ಅನ್ನೋ ಹೆಸರಲ್ಲಿ ಇನ್ನೂ ಇನ್ನೂ ಮುಚ್ಚಿಟ್ಕೊಂಡ್ರೆ ಪ್ರಯೋಜನ ಇಲ್ಲ. ಒಂದಲ್ಲಾ ಒಂದು ದಿನ ಸತ್ಯ ನಿಮಗೆ ಗೊತ್ತಾಗ್ಲೇಬೇಕು..."

"ಹೇಳು, ಅದೇನಿದ್ರೂ ಹೇಳ್ಬಿಡು ನಳಿನಿ. ಒಬ್ಳೇ ಕೊರಗ್ತಿರ್ಬೇಡ."

ಅವಳು ಅವನ ತೊಡೆಯಾಸರೆ ಬಿಟ್ಟು ಎದ್ದು ಕೂತು ಅವನ ಭುಜಕ್ಕೊರಗಿದಳು. ಅನಂತ ಅವಳ ಕೆದರಿದ ತಲೆಗೂದಲನ್ನು ಕೈಯಿಂದ ಒಪ್ಪ ಮಾಡಿದ. 'ನಾನಿದೀನಿ...' ಅನ್ನುವಂತೆ ಅವಳ ಕೈ ಹಿಡಿದು ಅದುಮಿದ. ಚಂದ್ರಮನ ಸಾಕ್ಷಿಯಲ್ಲಿ, ಬೆಳದಿಂಗಳ ತಂಪಿನಲ್ಲಿ, ಕಂಪಿಸುವ ಕಂಠದಿಂದ ಒಂದು ಸತ್ಯದ ಅನಾವರಣವಾಯ್ತು. ಅವನು ಪಿಟ್ಟೆಂದು ಉಸಿರೊಡೆಯದೆ ಅವಳ ಸಂಕಟಕ್ಕೆ ಕಿವಿಯಾದ. ಎಲ್ಲಾ ಹೇಳಿ ಹಗುರಾಗುವ ಹಲವರಿಕೆಯಲ್ಲಿ ನಳಿನಿ ತನ್ನ ಅಂತರಾಳ ಸುಡುತ್ತಿದ್ದ ಬೇಗೆಗೆ ಮಾತಿನ ರೂಪ ಕೊಟ್ಟಳು.

★★★

ಅಜ್ಜಿ. ನಳಿನಿಗಿದ್ದ ಏಕಮಾತ್ರ ಅವಲಂಬನೆ ಅಂದರೆ ಅವಳ ಅಜ್ಜಿ. ಹಾಗೆಂದು ಆ ಅಜ್ಜಿ ನಳಿನಿಯನ್ನು